**<u>ದಿನಾಂಕಃ 11.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎ ಜೆ ಎಸ್ ಕೆ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ತಿಳಿದು ಸಹಿ ಮಾಡಿರುತ್ತೇನೆ.

ದಿನಾಂಕ 06.08.1974 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ಎಮ್ ಆರ್ ನಂಬರ್ 123/1991-92 ರ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, ಬನ್ನೂರು ಗ್ರಾಮದ ಸರ್ವೆ ನಂಬರ್ 984/1 ಎ ರ ಎರಡು ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-3 ಮತ್ತು 4 ಎಂದು, ಎಮ್ ಆರ್ ನಂಬರ್ ಹೆಚ್ 118/2017-18 ರ ಗಣಕೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-5 ಎಂದು, ಬನ್ನೂರು ಗ್ರಾಮಾಂತರ ಗ್ರಾಮದ ಸರ್ವೆ ನಂಬರ್ 984/1 ಎ ರ 2021-2022 ನೇ ಸಾಲಿನ ಪಹಣಿ ಪತ್ರಿಕೆಯ ಗಣಕೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-6 ಎಂದು, ಏಳು ಭಾವ ಚಿತ್ರಗಳನ್ನು ಹಾಜರು ಪಡಿಸುತ್ತಿದ್ದು ಅವುಗಳನ್ನು ನಿಪಿ-7 ರಿಂದ 13 ಎಂದು, ಒಂದು ಸಿ.ಡಿ.ಯನ್ನು ಹಾಜರು ಪಡಿಸುತ್ತಿದ್ದು ಅದನು ನಿಪಿ-14 ಎಂದು, ನಮೂನೆ 21 ರ ನೋಟೀಸಿನ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-15 ಎಂದು, ಭೂಮಿ ಅರ್ಜಿ ಸ್ವೀಕೃತಿಯ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-16 ಎಂದು, ಪೌತಿ ಬದಲಾವಣೆ ರಿಪೋರ್ಟ್‌ನ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

<u>ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ